ಎ
೨-೫-೮೪
ಚೀಲಲ್ಲಿ ಕಾಳಿಲ್ಲದಿದ್ದರೆ
ಗಿಳಿಯಾದರೂ ಇರಲಿ

ಮೈಸೂರ ಗಿಜಿಟ್.

ನಂ. 18 ಸರ್ಕಾರದಿಂದ ಫಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಮೇ ಶಾ॥ 3, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀರ್ವಾರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಿಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರಟೆರಿಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಜೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲಾ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 10ನೇ ಏಪ್ರೆಲ್ 1884.

ನಂ. 8.—ಬೆಂಗಳೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ಫಾರೆಸ್ಟ್ಯುಗಳ ಚಕ್ಕುಬಂದಿಗಳು, ತಿದ್ದುಪಾಟುದ 1878ನೇ ಇಸವಿ ಫಾರೆಸ್ಟ್ಯು ರೂಲ್ಸ್ 9ನೇ ಸೆಕ್ಷನ್ ಅನುಸರಿಸಿ, ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುತ್ತೆ:—

ಹುಲಿಯೂರು ದುರ್ಗದ ಫಾರೆಸ್ಟ್ಯು.

ಹುಲಿಯೂರು ದುರ್ಗದ ಫಾರೆಸ್ಟ್ಯು (1) ಉಜನಿ (2) ಯಿಪ್ಪಾಡಿ ಯೆಂಬುದಾಗಿ ಕರೆಯಲ್ಪಟ್ಟ ಯರಡು ತಾಕುಗಳಾಗಿವೆ. ಇವುಗಳು ಠರಾವ್ ಮಾಡಲ್ಪಟ್ಟ ಗಂಟುರಯವರ 22 ಗಜಗಳುಳ್ಳ 1 ಸಂಕಲಿ ಅಗಲದ ಡಿವಾರ್ಕೇಷನ್ ಲೈನಿಂದ ಹದ್ದುಪಡಿಸಲ್ಪಟ್ಟಿರುತ್ತೆ.

1ನೇ ಉಜನಿ ತಾಕಿನ ಸುತ್ತಲೂ ಯಿರತಕ್ಕ ಈ ಲೈನಿನ ಫಾಸಲೆಯು 25 ಮೈಲಿ 5 ಫರ್‌ಲಾಂಗುಗಳು ಯಿರುತ್ತೆ. ಈ ಲೈನಲ್ಲಿ ಕೊನೆವರಿಗೂ, ಭೂಮಿ ಮೇಲ್‌ಭಾಗದಲ್ಲಿ 5 ಅಡಿಯಿತ್ತರ ವುಳ್ಳ ದೊಡ್ಡ ಮೈಲಿ ಕಲ್ಲುಗಳಿಂದಲೂ ವಂದು ಅಡಿ ಎತ್ತರವುಳ್ಳ ಚಿಕ್ಕ ಫರ್‌ಲಾಂಗ ಕಲ್ಲುಗಳಿಂದಲೂ ಗುರ್ತು ಮಾಡಲ್ಪಟ್ಟಿರುತ್ತೆ. ಮೈಲಿ ಕಲ್ಲುಗಳ ಸಂಖ್ಯೆಯು ಹುಲಿಯೂರ್ ದುರ್ಗದ ಬಳಿಯಣ ವಡ್ಡರ ಕಲ್ಲಿನಲ್ಲಿ ಆರಂಭಿಸಿ ಕ್ರಮಶಃ ಹಾಕಿರುತ್ತೆ, ಫರ್‌ಲಾಂಗ್ ಕಲ್ಲುಗಳು ಪ್ರತಿ ಮೈಲಿಯೊಳಗೂ ಕ್ರಮವಾಗಿ ಸಂಖೆ ಹಾಕಲ್ಪಟ್ಟಿರುತ್ತೆ. ಯಡಪಾರ್ಶ್ವದಿಂದ ಬಲಪಾರ್ಶ್ವಕ್ಕೆ ಹೋಗಲು, ಈ ತಾಕಿನ ಡಿಮಾರ್ಕೇರ್ಷ್ ಲೈನಿನ ಯಡಭಾಗಕ್ಕೆ ಇದರಡೀ ಕಂಡ ಗ್ರಾಮಗಳಿರುತ್ತೆ:—

ಫಾರೆಸ್ಟಿನ ಉತ್ತರಕ್ಕೆ.

1	ತಿಂಗೋಹಳ್ಳಿ	6	ಅನಗರಹಳ್ಳಿ
2	ಮುತ್ತೇನಹಳ್ಳಿ (ಕಾಯಂಗುತ್ತಾ ಗ್ರಾಮಗಳು)	7	ಹುಲಿಕಟ್ಟೆ,
3	ದೀಪಾಮುದಿಕೆರೆ	8	ಕೆಂಜೆನಹಳ್ಳಿ,
4	ದಿವಾಪಟ್ಣ (ಕಾಯಂಗುತ್ತಾ)	9	ವುಂಡಲಗೆರೆ
5	ಬೆಂಜೆಕಲ್ಲು	10	ತಾವರೇಕೆರೆ

ಫಾರೆಸ್ಟಿನ ಪೂರ್ವದಿಕ್ಕಿಗೆ.

1 ಯಿರಪ್ಪಸಂದ್ರ

ಫಾರೆಸ್ಟಿನ ದಕ್ಷಿಣದಿಕ್ಕಿಗೆ.

1	ಕಾಚಹಳ್ಳಿ	4	ವೂಜನಿ
2	ಯಲ್ಲಿಕಾಡ್ಲು	5	ಹಿತ್ತಲಪುರ
3	ಹೇವಸಂದ್ರ	6	ಹೊನ್ನಮಾಚೇಹಳ್ಳಿ (ಇನಾಂಗ್ರಾಮ)

ಫಾರೆಸ್ಟಿನ ಪಶ್ಚಿಮಕ್ಕೆ

1	ಹುಲಿಯೂರುದುರ್ಗ	2	ಹೊಸಹಳ್ಳಿ

ಈ ತಾಕಿನಲ್ಲಿ ಕಾಡಬೋರನಹಳ್ಳಿ ಗ್ರಾಮ ಆವರಣ ದೇಖಿಲ್ ಕೀರುತ್ತೆ.
ಈ ಆವರಣವು ಸಾಧಾರಣವಾದ 6 ಅಡಿ ಅಗಲದ ಡಿಮಾರ್ಕೇರ್ಷ್ ಲೈನಿಂದ ಗುರ್ತು ಮಾಡಲ್ಪಟ್ಟಿರುತ್ತೆ.

(2)ನೇ ತಾಕಾದ ಯಿಪ್ಪಾಡಿ ಸುತ್ತಲೂ ಯಿರತಕ್ಕ ಲೈನು 15 ಮೈಲಿ 7 ಫರಲಾಂಗ್ ಫಾಸಲೆ ಯಿರುತ್ತೆ. ಇದರಲ್ಲಿಯೂ ಕೊನೇ ವರಿಗೂ ಮೈಲಿ ಫರಲಾಂಗ್ ಕಲ್ಲುಗಳಿಂದ ಗುರ್ತು ಮಾಡಲ್ಪಟ್ಟಿದೆ, ಮೈಲಿ ಕಲ್ಲುಗಳ ಸಂಖೆಯು, ಯಿಪ್ಪಾಡಿಬಳಿಯಣ ಬಾಲದೊರೆ ಕಲ್ಲಿನಲ್ಲಿ ಆರಂಭಿಸಿ ಕ್ರಮಶಃ ಹಾಕಲ್ಪಡುವದು, ಫರಲಾಂಗ್ ಕಲ್ಲುಗಳ ಸಂಖೆಸುದಾ ಪ್ರತಿ ಮೈಲಿಯೊಳಗೆ ಕ್ರಮಶಃ ಹಾಕಲ್ಪಡುವದು, ಯಡ ಪಾರ್ಶ್ವದಿಂದ ಬಲಪಾರ್ಶ್ವಕ್ಕೆ ಹೋಗಲು ಈ ತಾಕಿನ ಡಿಮಾರ್ಕೇರ್ಷ ಲೈನಿನ ಯಡಭಾಗಕ್ಕೆ ಇದರಡಿ ಕಂಡ ಗ್ರಾಮಗಳಿರುತವೆ:—

ಫಾರೆಸ್ಟಿನ ಉತ್ತರಕ್ಕೆ.

1	ಯಿಪ್ಪಾಡಿ	2	ನಾಗನಹಳ್ಳಿ

ಫಾರೆಸ್ಟಿನ ಪೂರ್ವಕ್ಕೆ.

1	ವರತೀಹಳ್ಳಿ	2	ಬಿದರಹಳ್ಳಿ

ಫಾರೆಸ್ಟಿನ ದಕ್ಷಿಣಕ್ಕೆ.

1	ನೀಲಸಂದ್ರ	3	ಚಿಕೊಂಡನಕುಪ್ಪೆ
2	ಹೇರೋಹಳ್ಳಿ	4	ಗುಡಿತಿಪ್ಪಸಂದ್ರ.

ಫಾರೆಸ್ಟಿನ ಪಶ್ಚಿಮಕ್ಕೆ

1	ನಗತೆಹಳ್ಳಿ	2	ಮದ್ದಪ್ಪನಹಳ್ಳಿ.

ಸೆರ್ವೆದುರ್ಗದ ಫಾರೆಸ್ಟು.

ಮೂಗಡಿತಾಲ್ಲೂಕಿನಲ್ಲಿರತಕ್ಕ ಸೆರ್ವೆದುರ್ಗದ ಫಾರೆಸ್ಟು (1) ಅರಕಾವತಿ (2) ಶಿದ್ದೇದೇವರಬಟ್ಟು ಯಂಬ ಯರೆಡು ತಾಕುಗಳಾಗಿವೆ, ಇವುಗಳು 22ಗಜಗಳುಳ್ಳ ಶರಾವ್ ಮಾಡಲ್ಪಟ್ಟ ಗಂಟುರಯವರ 1 ಸಂಕಲಿ ಅಗಲದ ಡಿಮಾರ್ಕೇಷ್ಟ ಲೈನಿಂದ ಸುತ್ತಲೂ ಹದ್ದುಪಡಿಸಲ್ಪಟ್ಟಿರುತ್ತೆ. ಅರಕಾವತಿ ತಾಕಿನ ಸುತ್ತಲೂ ಇರತಕ್ಕ ಈ ಲೈನಿನ ಫಾಸಲೆಯು 22 ಮೈಲಿ 3 ಫರ್‌ಲಾಂಗ್ಸು, ಈ ಲೈನಿನಲ್ಲಿ ಕೊನೆವರಿಗೂ, ಭೂಮಿ ಫ್ಲೇಲ್‌ಭಾಗದಲ್ಲಿ 5 ಅಡಿಯತ್ತರವುಳ್ಳ ದೊಡ್ಡ ಮೈಲಿಕಲ್ಲುಗಳಿಂದಲೂ ವಂದು ಅಡಿ ಯತ್ತರವುಳ್ಳ ಫರ್‌ಲಾಂಗ್ ಕಲ್ಲುಗಳಿಂದಲೂ ಗುರ್ತುಮಾಡಲ್ಪಟ್ಟಿರುತ್ತೆ. ಮೈಲಿಕಲ್ಲುಗಳ ಸಂಖೆಯು ನಾಯಕನಪಾಳ್ಯದ ಬಳಿಯಣ ಬಸವನ ಕಲ್ಲಿನಲ್ಲಿ ಆರಂಭಿಸಿ ಕ್ರಮಶಃ ಹಾಕಿರುತ್ತೆ; ಫರಲಾಂಗ್ ಕಲ್ಲುಗಳು ಸುದಾ ಪ್ರತಿ ಮೈಲಿವಳಗೆ ಕ್ರಮಶಃ ನಂಬರು ಹಾಕಲ್ಪಟ್ಟಿರುತ್ತೆ. ಯಡ ಪಾರಶ್ವದಿಂದ ಬಲಪಾರಶ್ವಕ್ಕೆ ಹೋಗಲು ಡಿಮಾರ್ಕೇಷ್ಟ ಲೈನಿನ ಯಡಪಾರಶ್ವಕ್ಕೆ ಇದರಡಿಕಂಡ ಗ್ರಾಮಗಳಿರುತ್ತವೆ.

ಫಾರೆಸ್ಟಿನ ಉತ್ತರದಿಕ್ಕಿಗೆ.

1 ತಗಚಿಕುಪ್ಪೆ
2 ಬಾಜೇನಹಳ್ಳಿ
3 ಅಡಕೆಮಾರನಹಳ್ಳಿ
4 ಕಲ್ಲೂರು
5 ವೀರಾಪುರ

ಫಾರೆಸ್ಟಿನ ಪೂರ್ವದಿಕ್ಕಿಗೆ.

1 ದಬ್ಬಗುಳಿ
2 ಮಂಚನಬೆಲೆ
3 ಹಾಗಲಹಳ್ಳಿ

ಫಾರೆಸ್ಟಿನ ದಕ್ಷಿಣದಿಕ್ಕಿಗೆ.

1 ದೊಡ್ಡಸೂಲಕೆರೆ

ಫಾರೆಸ್ಟಿನ ಪಶ್ಚಿಮದಿಕ್ಕಿಗೆ.

1 ಮತ್ತಾ
2 ನಾಯಿಕನಪಾಳ್ಯ
3 ಕರಲಮಂಗಲ
4 ಗುಡ್ಡಹಳ್ಳಿ
5 ಪೋಲೋಹಳ್ಳಿ (ಜೋಡಿ)
6 ಮರಲಗೊಂಡ್ಲ

ಈ ತಾಕಿನಲ್ಲಿ ನೆಲಪಟ್ಟ ಗ್ರಾಮ ಆವರಣ ದೇಖಿಲ್ ಕೇರಿರುತ್ತೆ. ಈ ಆವರಣವು 6 ಅಡಿ ಅಗಲದ ಸಾಧಾರಣವಾದ ಡಿಮಾರ್ಕೇಷ್ಟ ಲೈನ್ನಿಂದ ಗುರ್ತು ಮಾಡಲ್ಪಟ್ಟಿರುತ್ತೆ.

(2)ನೇ ಶಿದ್ದೇದೇವರ ಬಟ್ಟನೆಂಬ ತಾಕಿನಸುತ್ತಲೂ ಇರತಕ್ಕ ಲೈನು 20 ಮೈಲಿ 3 ಫರ್‌ಲಾಂಗುಗಳ ಫಾಸಲೆಯಿರುತ್ತೆ. ಈ ಲೈನಿನಲ್ಲಿಯೂ ಕೊನೆವರಿಗೂ ಮೈಲಿ, ಪ ಫರ್‌ಲಾಂಗು ಕಲ್ಲುಗಳಿಂದ ಗುರ್ತು ಮಾಡಲ್ಪಟ್ಟಿಧೆ. ಮೈಲಿ ಕಲ್ಲುಗಳ ಸಂಖೆಯು, ನಾಗಮಂಗ ಲದ ಬಳಿಯಣ ಲಾಲದರೇಹಳ್ಳದಿಂದ ಆರಂಭಿಸಿ ಕ್ರಮಶಃ ಹಾಕಲ್ಪಟ್ಟಿರುತ್ತೆ. ಫರ್‌ಲಾಂಗ್ ಕಲ್ಲುಗಳು ಪ್ರತಿ ಮೈಲಿಯೊಳಗೂ ನಂಬರು ಹಾಕಲ್ಪಟ್ಟಿರುತ್ತೆ. ಯಡಪಾರಶ್ವದಿಂದ ಬಲಪಾರಶ್ವಕ್ಕೆ ಹೋಗಲು ಈ ತಾಕಿನ ಡಿಮಾರ್ಕೇಷ್ಟ ಲೈನಿನ ಯಡಭಾಗಕ್ಕೆ ಇದರಡೀ ಕಂಡ ಗ್ರಾಮಗಳಿರುತ್ತೆ:—

ಫಾರೆಸ್ಟಿನ ಉತ್ತರಕ್ಕೆ.

1 ಬಸವನಹಳ್ಳಿ (ಕಾಯಂಗುತ್ತಾ ಪಾಳು ಜಮೀನು)
2 ಕರಲಹಳ್ಳಿ (ಕಾಯಂಗುತ್ತಾ ಬೇಚಿರಾಕ್)

ಫಾರೆಸ್ಟಿನ ಪೂರ್ವದಿಕ್ಕಿಗೆ.

1 ನಾಗಮಂಗಲ
2 ರಂಗಾಚಾರಿಪಾಳ್ಯ (ಕಾಯಂಗುತ್ತಾ ಬೇಚಿರಾಕ್)
3 ಹಂಚಿಕುಪ್ಪೆ
4 ಹಂಣಿಕಾರನಹಳ್ಳಿ
5 ಅತ್ತಿಮ್ಮಗೆರೆ

ಫಾರೆಸ್ಟಿನ ದಕ್ಷಿಣಕ್ಕೆ.

1 ಗಾಣಕಲ್ಲು
2 ಅಜ್ಜನಹಳ್ಳಿ
3 ಗುಡ್ಲಹಳ್ಳಿ (ಕಾಯಂಗುತ್ತಾ ಗ್ರಾಮ)

ಫಾರೆಸ್ಟಿನ ಪಶ್ಚಿಮಕ್ಕೆ.

1 ನೇರಲವಾಡಿ
2 ಲಕ್ಕಸಂದ್ರ
3 ಹಳ್ಳಿಗೆಹಳ್ಳಿ
4 ಜೋಳೇನಹಳ್ಳಿ (ಜೋಡಿ ಗ್ರಾಮ)
5 ಕಂಬುದೇವನಹಳ್ಳಿ
6 ಮೂಡಬಾಳು
7 ಪೂರಾ

ಈ ತಾಕಿನ ಪಳಗೆ ಜೋಡಿ ಕಂದಹಳ್ಳಿ ಗ್ರಾಮ ಆವರಣ ದೇಖೀಲ್ ಇರುತ್ತೆ. ಈ ಅವರಣವು ಸಾಧಾರಣವಾದ 6 ಅಡಿ ಅಗಲವುಳ್ಳ ಡಿಮಾರ್ಕೇಷನ್ ಲೈನಿನಿಂದ ಗುರ್ತು ಮಾಡಲ್ಪಟ್ಟಿರುತ್ತೆ.

ಮೂಕಳಿ ಫಾರೆಸ್ಟು.

ಮೂಕಳಿ ಫಾರೆಸ್ಟು (1) ಎಕ್ ಮೂಕಳಿ (2) ಬೆರಲುಗುಡ್ಡೆ ಯೆಂಬ ಎರಡು ತಾಕುಗಳಾಗಿವೆ, ಇದು ಕರಾವ್ ಮಾಡಲ್ಪಟ್ಟ ಗಂಟ್ರ್ ಯವರ ವೆಂದು ಸಂಕಲಿ ಅಂದರೆ 22 ಗಜ ಅಗಲವುಳ್ಳ ಭಿನ್ನವಾದ ಡಿಮಾರ್ಕೇಷನ್ ಲೈನಿನಿಂದ ಹದ್ದುಪಡಿಸಲ್ಪಟ್ಟಿರುತ್ತೆ.

ಮೊದಲನೇ ತಾಕ್ ಲೈನಿನ ಫಾಸಲೆಯು 22 ಮೈಲಿ 4 ಫರ್ಲಾಂಗುಗಳು; 2ನೇವರ ಫಾಸಲೆಯು 2 ಮೈಲಿ 6 ಫರ್ಲಾಂಗುಗಳು; ಇದರಲ್ಲಿ ಕೊನೆವರಿವಿಗೂ ಭೂಮಿ ಮೇಲೆ 5 ಅಡಿ ಯತ್ತರವುಳ್ಳ ದೊಡ್ಡ ಮೈಲಿ ಕಲ್ಲುಗಳಿಂದಲೂ ವಂದು ಅಡಿ ಯತ್ತರವುಳ್ಳ ಫರ್ಲಾಂಗು ಕಲ್ಲುಗಳಿಂದಲೂ ಗುರ್ತು ಮಾಡಲ್ಪಟ್ಟಿರುತ್ತೆ. ಮೊದಲನೇ ಲೈನಿನ ಮೈಲಿ ಕಲ್ಲುಗಳು ಗಂಗವಾಡಿ ನದಿಗೆ ಸ್ವಲ್ಪ ಬಲಭಾಗಕ್ಕಿರುವ ಕ್ಯಾಸಾಪುರದ ಬಳಿಯ ಬಂಡೆಯಿಂದ ಕ್ರಮವಾಗಿ ಸಂಖೆ ಹಾಕಲ್ಪಟ್ಟಿರುತ್ತೆ. ಎರಡನೇ ಲೈನಿನ ಮೈಲಿ ಕಲ್ಲುಗಳು ಕದರಮಂಗಲದ ಕೆರೆಕಟ್ಟೆಪಶ್ಚಿಮ ಭಾಗದ ಬಂಡೆಯಿಂದ ಸಂಖೆ ಹಾಕಲ್ಪಟ್ಟಿರುತ್ತೆ; ಫರ್ಲಾಂಗು ಕಲ್ಲುಗಳು ಆಯಾಯ ಮೈಲಿ ವಳಗೆ ಸಂಖೆ ಹಾಕಲ್ಪಡುವವು. (ಗಡಿಯಾರದ ಮುಳ್ಳುಗಳ ಹಾಗೆ) ಯಡಪಾರ್ಶ್ವದಿಂದ ಬಲಪಾರ್ಶ್ವಕ್ಕೆ ಹೋಗಲು ಡಿಮಾರ್ಕೇಷನ್ ಲೈನಿನ ಯಡಭಾಗಕ್ಕೆ ಇದರಡಿ ಕಂಡ ಗ್ರಾಮಗಳು ಯಾ ಗುರ್ತಾದ ಜಮೀನುಗಳು ಇರುತ್ತವೆ.

1ನೇ ತಾಕಿಗೆ.

ಫಾರೆಸ್ಟಿನ ವುತ್ತರ ದಿಕ್ಕಿಗೆ.

1 ದ್ಯಾವಸಂದ್ರ
2 ಯಲೇಕಡಕಲ್
3 ಕಾಚಹಳ್ಳಿ
4 ಬ್ಯಾಡರಹಳ್ಳಿ
5 ವಡ್ಡನತೊರೆ ಅಥವಾ ಕೋತಿಹಳ್ಳ
6 ವಿರಪಸಂದ್ರ
7 ಹೊಂಬೇಗವುಡನದೊಡ್ಡಿ

ಫಾರೆಸ್ಟಿನ ಪೂರ್ವಕ್ಕೆ.

1 ಚಿಕ್ಕಗಂಗವಾಡಿ
2 ದೊಡ್ಡಗಂಗವಾಡಿ
3 ಗಂಗವಾಡಿತೊರೆ
4 ಆನಮಾನಹಳ್ಳಿ ಸರ್ವಮೂನ್ಯ ಜಂಗಲ್
5 ಕ್ಯಾಸಾಪುರ
6 ಚ್ಯಾಮನಹಳ್ಳಿ
7 ಡಿಟೋ ಸರ್ವ ಮೂನ್ಯ ಜಂಗಲ್

ಫಾರೆಸ್ಟಿನ ದಕ್ಷಿಣಕ್ಕೆ.

1 ದಳವಾರ
2 ಚಿಕ್ಕೇನಹಳ್ಳಿ
3 ನಾಗವಾರ
4 ಕೆಲಗೆರೆ
5 ಹಾರುವಳ್ಳಿದೊಡ್ಡಿ
6 ಬೇವೂರು
7 ಭೈರನಾಯಕನಹಳ್ಳಿ
8 ಅಮ್ಮಹಳ್ಳಿದೊಡ್ಡಿ

ಫಾರೆಸ್ಟಿನ ಪಶ್ಚಿಮಕ್ಕೆ.

1 ಕದರಮಂಗಲ
2 ಡಿಟೋ ಕೆರೆ
3 ಚಲಮಸಂದ್ರ
4 ಶಿವನಹಳ್ಳಿ

ನಂಬರ್ 2ನೇ ತಾಕಿಗೆ.

ಫಾರೆಸ್ಟಿನ ಉತ್ತರಕ್ಕೆ.

1 ಚಲಮಸಂದ್ರ
2 ತಲೆಬುಂಡೇಹಳ್ಳಿ

ಫಾರೆಸ್ಟಿನ ಪೂರ್ವಕ್ಕೆ.

1 ಕದರಮಂಗಲದ ಕೆರೆ.

ಫಾರೆಸ್ಟಿನ ದಕ್ಷಿಣಕ್ಕೆ.

1 ಡಿಟೋ ಗ್ರಾಮ

ಫಾರೆಸ್ಟಿನ ಪಶ್ಚಿಮಕ್ಕೆ.

1 ನಿಡಸಾಲೆ ಗ್ರಾಮದ ಕುರಚಗುಡಿಡ.

ಮೊದಲನೆ ತಾಕಿನಲ್ಲಿ, ಮೂಕಳಿ, ಹೊಸಹಳ್ಳಿ, ನಾಯಿದೊಲೆ ಗ್ರಾಮಗಳು ಆವರಣ ದೇಖಿಲ್ ಶೇರಿ ಇರುತ್ತೆ, ಇದರ ಸುತ್ತಲೂ 6 ಅಡಿ ಅಗಲದ ಸಾಧಾರಣ ಲೈನ್ ಹಾಕಿರುತ್ತೆ.

ಮಣ್ಣುಗುಡ್ಡೆ ಫಾರೆಸ್ಟು.

ಮಣ್ಣುಗುಡ್ಡೆ ಜಂಗಲಿಯು (1) ದೊಡ್ಡಮಣ್ಣುಗುಡ್ಡೆ (2) ಚಿಕ್ಕಮಂಣುಗುಡ್ಡೆಯಂಬ ಎರಡು ತಾಕುಗಳಿಗಿರುತ್ತೆ, ಇದರ ಸುತ್ತಲೂ ಥರಾವ್ ಮಾಡಲ್ಪಟ್ಟ ಗಂಟರಿಸ್‌ಯವರ 22 ಗಜಗಳುಳ್ಳ ವೆಂದು ಸಂಕಲಿ ಅಗಲದ ಭಿನ್ನವಾದ ಡಿಮಾರ್ಕೇಷ್ಟ್ ಲೈನ್ ಇರುತ್ತೆ. ಮೊದಲನೇ ತಾಕಿನ ಲೈನಿನ ಫಾಸಲೆಯು 11 ಮೈಲಿಗಳು; 2ನೇ ತಾಕಿನ ಲೈನಿನ ಫಾಸಲೆಯು 10 ಮೈಲಿ, 6 ಫರಲಾಂಗು, 143 ಗಜಗಳಿರುತ್ತೆ. ಇದು ಕೊನೇವರಿವಿಗೂ ಭೂಮಿ ಮೇಲೆ 5 ಅಡಿ ಯತ್ತರವುಳ್ಳ ದೊಡ್ಡ ಮೈಲಿ ಕಲ್ಲುಗಳಿಂದಲೂ 1 ಅಡಿ ಎತ್ತರವುಳ್ಳ ಸಂಣ ಫರಲಾಂಗ್ ಕಲ್ಲುಗಳಿಂದಲೂ ಗುರ್ತು ಮಾಡಲ್ಪಟ್ಟಿದೆ. ಮೊದಲನೇ ತಾಕಿನ ಮೈಲಿ ಕಲ್ಲುಗಳು ಮೈಸೂರು ರಸ್ತೆಗೆ ಬಲಪಾರ್ಶ್ವದಲ್ಲಿ 33ನೇ ಮೈಲಿ ಬಳಿಯ "ಬಾಲರೆ" ಯೆಂಬ ಬಂಡೆಯಿಂದ ಆರಂಭಿಸಿ ಕ್ರಮಕಃ ಸಂಖೆ ಹಾಕಲ್ಪಟ್ಟಿರುತ್ತೆ, ಯರಡನೇ ತಾಕಿನವು ಮೈಸೂರು ರಸ್ತೆ 34ನೇ ಮೈಲಿ ಬಳಿಯಣ ಲೆವಲ್ ಕ್ರಾಸಿಂಗ್ ಸ್ಥಳದ ಸಮೀಪ ಇರುವ ಗುಟ್ಟದಲ್ಲಿ ಆರಂಭಿರುತ್ತೆ; ಫರಲಾಂಗ್ ಕಲ್ಲುಗಳು ಆಯಾಯ ಮೈಲಿ ವಳಗೆ ಕ್ರಮಕಃ ನಂಬರು ಹಾಕಲ್ಪಟ್ಟಿವೆ, (ಫಿಡಿಮೂರದ ಮುಳ್ಳುಗಳೋಪಾದಿಯಲ್ಲಿ) ಯಡಪಾರ್ಶ್ವದಿಂದ ಬಲಪಾರ್ಶ್ವಕ್ಕೆ ಹೋಗಲು ಡಿಮಾರ್ಕೇಷ್ಟ್ ಲೈನಿನ ಎಡಭಾಗಕ್ಕೆ ಇದರಡೀ ಕಂಡ ಗ್ರಾಮಗಳು ಯಾ ಮುಖ್ಯವಾದ ಜಮಿನುಗಳು ಯಿರುತ್ತವೆ.

ನಂಬರ್ 1ನೇ ತಾಕಿಗೆ.

ಫಾರೆಸ್ಟಿನ ಉತ್ತರ ದಿಕ್ಕಿಗೆ.

1 ಕುರಬರಹಳ್ಳಿ
2 ಗೊಲ್ಲರದೊಡ್ಡಿ
3 ಚನ್ನೇನಹಳ್ಳಿ
4 ಭದ್ರೇಗೌಡನ ದೊಡ್ಡಿ

ಫಾರೆಸ್ಟಿನ ಪೂರ್ವಕ್ಕೆ.

1 ರಂಗರಾಯರದೊಡ್ಡಿ
2 ಅರ್ಜಿಗರಹಳ್ಳಿ
3 ರಾಮಣ್ಣನ ದೊಡ್ಡಿ
4 ಮೈಸೂರು ರಸ್ತೆ 31ನೇ ಮೈಲಿ ಮೊದಲು 33ನೇ ಮೈಲಿ ಕಲ್ಲು ವರಿವಿಗೆ ದಕ್ಷಿಣ ದಿಕ್ಕಿಗೆ
5 ಶಿದ್ದೇಗವ್ಡನ ದೊಡ್ಡಿ

ಫಾರೆಸ್ಟಿನ ದಕ್ಷಿಣಕ್ಕೆ.

1 ವಂದಾರ ಕುಪ್ಪೆ ಕೆರೆ
2 ಪವಳಿದೊಡ್ಡಿ

ಫಾರೆಸ್ಟಿನ ಪಶ್ಚಿಮಕ್ಕೆ.

1 ಕನ್ನಮಂಗಲದ ಸರ್ವಮಾನ್ಯ ಜಂಗಲ್
2 ಡಣಾಯಿಕಪುರ

ನಂಬರ 2ನೇ ತಾಕಿಗೆ.

ಫಾರೆಸ್ಟಿನ ಉತ್ತರಕ್ಕೆ.

1 ಕುಂಭಾಪುರ
2 ರಾಮೇಗವ್ವಡನ ಕಟ್ಟೆ

ಫಾರೆಸ್ಟಿನ ಪೂರ್ವಕ್ಕೆ.

1 ಅಂಜನಾಪುರ
2 ಗೊಲ್ಲರದೊಡ್ಡಿ
3 ಬ್ಯಾಲಕುಳಿ
4 ಡಿಟೋ ಹಳ್ಳ

ಫಾರೆಸ್ಟಿನ ದಕ್ಷಿಣಕ್ಕೆ.

1 ಹುಚ್ಚೇಗವ್ವಡನ ದೊಡ್ಡಿ
2 ಬ್ರಹ್ಮಣ್ಯಪುರ
3 ತಿಮ್ಮಸಂದ್ರ
4 ವಡ್ಡರದೊಡ್ಡಿ

ಫಾರೆಸ್ಟಿನ ಪಶ್ಚಿಮಕ್ಕೆ.

1 ಬೇಚಿರಾಕ್ ವನಗನಹಳ್ಳಿ
2 ವಂದಾರಕುಪ್ಪೆ
3 ಮಂಚಟ್ಟಹಳ್ಳಿ
4 30 ಮತ್ತು 32ನೇ ಮೈಲಿ ಕಲ್ಲಿನ ಮಧ್ಯದ ರೈಲ್‌ರಸ್ತೆ

ಇದರಲ್ಲಿ ಆವರಣ ಯಾವದೂ ಸೇರಿ ಇಲ್ಲ.—

ಚಿಲ್ಕದದಿ ಮತ್ತು ಬಸವನ ಬೆಟ್ಟ ಫಾರೆಸ್ಟುಗಳು ವಳಿತವಾಗಿ ಕಾವೇರಿ ಫಾರೆಸ್ಟು.

ಕಾವೇರಿ ಫಾರೆಸ್ಟು ವಂದೇ ತಾಕ್ ಆಗಿರುತ್ತೆ, ಇದರ ಸುತ್ತಲು 22 ಗಜಕ್ಕೆ ಸಮವಾದ ತರಾವ್ ಮಾಡಲ್ಪಟ್ಟ ಗಂಟರಿನ್ ಯವರ ವಂದು ಸಂಕಲಿ ಅಗಲದ ಡಿವಾರ್ಕೇಷನ್ ಲೈನ್ ಹಾಕಲ್ಪಟ್ಟಿರುತ್ತೆ. ಈ ಲೈನಿನ ಫಾಸಲೆಯು 47 ಮೈಲಿ, 5 ಫರಲಾಂಗ್, 132 ಗಜಗಳು ಇರುತ್ತೆ; ಈ ಲೈನಿನಲ್ಲಿ ಕೊನೇ ವರಿಗೂ ಭೂಮಿ ಮೇಲೆ 5 ಅಡಿ ಯತ್ತರವುಳ್ಳ ದೊಡ್ಡ ಮೈಲಿ ಕಲ್ಲುಗಳಿಂದಲೂ ವಂದಡಿ ಎತ್ತರವುಳ್ಳ ಸಂಣ ಫರಲಾಂಗ್ ಕಲ್ಲುಗಳಿಂದಲೂ ಗುರ್ತು ಮಾಡಲ್ಪಟ್ಟಿದೆ. ಮೈಲಿ ಕಲ್ಲುಗಳು ಭೂವಹಳ್ಳಿ ಕೆರೆಬಳಿಯ ರಸ್ತೆಯಲ್ಲಿ 0 ಗುರ್ತು ಮೊದಲು ಮಾಡಿ ಕ್ರಮಶಃ ಸಂಖೆ ಹಾಕಲ್ಪಟ್ಟಿರುತ್ತೆ, ಫರಲಾಂಗ್ ಕಲ್ಲುಗಳು ಪ್ರತಿ ಮೈಲಿಯೊಳಗೆ ಕ್ರಮಶಃ ಸಂಖೆ ಹಾಕಲ್ಪಟ್ಟಿರುತ್ತೆ (ಫಡಿಯಾರದ ಮುಳ್ಳುಗಳೋಪಾದಿಯಲ್ಲಿ) ಎಡಕಡೆಯಿಂದ ಬಲಕಡೆಗೆ ಹೋಗಲು, ಡಿವಾರ್ಕೇಷನ್ ಲೈನಿನ ಎಡಭಾಗದಲ್ಲಿ ಇದರಡೀಕಂಡ ಗ್ರಾಮಗಳು ಯಾ ಮುಖ್ಯವಾದ ಜವಿನುಗಳು ಇರುತ್ತವೆ.

ಫಾರೆಸ್ಟಿನ ಉತ್ತರಕ್ಕೆ.

1 ಗಾಣಾಳು
2 ಬ್ಯಾಡರಹಳ್ಳಿ
3 ಹಗಾದೂರು
4 ಬಸವಾಪುರ
5 ಗುಂಡಾಪುರ
6 ಕೆಂಪನದೊಡ್ಡಿ
7 ಹರಿಹರಾ
8 ಬೂವಹಳ್ಳಿ
9 ದುಂತೂರು
10 ನಾಯಿಕರಹಳ್ಳಿ
11 ದೊಡ್ಡಅಲಹಳ್ಳಿ
12 ವೂಯ್ಯಂಬಳ್ಳಿ
13 ಹಳಗಳ್ಳಿ
14 ಶಿವನಹಳ್ಳಿ

ಫಾರೆಸ್ಟಿನ ಪೂರ್ವಕ್ಕೆ.

1 ಅರ್ಕಾವತಿ ನದಿ

ಫಾರೆಸ್ಟಿನ ದಕ್ಷಿಣಕ್ಕೆ.

1. ಕಾವೇರಿ ನದಿ

ಫಾರೆಸ್ಟಿನ ಪಶ್ಚಿಮಕ್ಕೆ.

1 ಪಂಪಾ ನದಿ

ಈ ಫಾರೆಸ್ಟಿನಲ್ಲಿ ಹುಲಿಯ, ಮಕಲುಂದ, ಚಿಲಂದವಾಡಿ, ಈರಸಂದ್ರ, ಹಗನೂರು, ಹೇರ್ಯ, ಕೊನಗುಂಡಿ, ಸೋಲಗೇರಿ, ಬಸವ ಹಳ್ಳಿ, ಸಾಂಬಾಪುರ, ಮುತತ್ತಿ ತಲವಾಡಿ, ಸೊಲಬ ಮತ್ತು ಮಣುಗರನ ಕಟ್ಟೆ. ಈ ಗ್ರಾಮಗಳು ಆವರಣ ದೇಖೀಲ್ ಸೇರಿ ಇದೆ. ಈ ಆವರಣಗಳು 6 ಅಡಿ ಅಗಲವುಳ್ಳ ಸಾಧಾರಣವಾದ ಡಿಮಾರ್ಕೇರ್ಷ್ ಲೈನಿನಿಂದ ಗುರ್ತು ಮಾಡಲ್ಪಟ್ಟವೆ.

ರಾಗಿಹಳ್ಳಿ ಫಾರೆಸ್ಟು.

ರಾಗಿಹಳ್ಳಿ ಫಾರೆಸ್ಟು ಬಂದೇ ತಾಕ್ ಆಗಿರುತ್ತೆ, ಇದರ ಸುತ್ತಲು 22 ಗಜಕ್ಕೆ ಸಮವಾದ ಅಂತರವು ಮಾಡಲ್ಪಟ್ಟ ಗಂಟರ್ಸ್‌ಯವರ ಬಂದು ಸಂಕಲಿ ಅಗಲದ ಡಿವಾರ್‌ಕೇರ್ಷ ಲೈನ್ ಹಾಕಲ್ಪಟ್ಟಿರುತ್ತೆ. ಈ ಲೈನಿನ ಫಾಸಲೆಯು 20 ಮೈಲಿ, 6 ಫರ್‌ಲಾಂಗ್, 192 ಗಜಗಳು ಇರುತ್ತೆ. ಈ ಲೈನಿನಲ್ಲಿ ಕೊನೆವರಿವಿಗೂ ಭೂಮಿ ಮೇಲೆ 5 ಅಡಿ ಎತ್ತರವುಳ್ಳ ದೊಡ್ಡ ಮೈಲಿ ಕಲ್ಲುಗಳಿಂದಲೂ ಬಂದು ಅಡಿ ಎತ್ತರವುಳ್ಳ ಸಣ್ಣ ಫರ್‌ಲಾಂಗ್ ಕಲ್ಲುಗಳಿಂದಲೂ ಗುರ್ತು ಮಾಡಲ್ಪಟ್ಟಿದೆ. ಮೈಲಿ ಕಲ್ಲುಗಳು ದೊಡ್ಡ ಮ್ಯಾನಕೆರೆ ತೂಬಿನ ಸಮೀಪದ ಬಂಡೆ ಮೊದಲುಮಾಡಿ ಕ್ರಮಶಃ ಸಂಖೆಹಾಕಲ್ಪಟ್ಟಿರುತ್ತೆ, ಫರ್‌ಲಾಂಗ್ ಕಲ್ಲುಗಳು ಪ್ರತಿ ಮೈಲಿಯೊಳಗೆ ಕ್ರಮಶಃ ಸಂಖೆ ಹಾಕಲ್ಪಟ್ಟಿರುತ್ತೆ. ಎಡಕಡೆಯಿಂದ ಬಲಕಡೆಗೆ ಹೋಗಲು (ಫೆಡಿಯಾರದ ಮುಳ್ಳುಗಳೋಪಾದಿಯಲ್ಲಿ) ಡಿವೊರ್‌ಕೇರ್ಷ ಲೈನಿನ ಎಡಭಾಗದಲ್ಲಿ ಇದರಡೀ ಕಂಡ ಗ್ರಾಮಗಳು ಯಾ ಮುಖ್ಯವಾದ ಜಮ್ರ್ಗಳು ಇರುತ್ತವೆ:—

ಫಾರೆಸ್ಟಿನ ಉತ್ತರಕ್ಕೆ.

1 ಭೂತಾನಹಳ್ಳಿ
2 ಬಂನೇರಗಟ್ಟಾ

ಫಾರೆಸ್ಟಿನ ಪೂರ್ವಕ್ಕೆ.

1 ಸಂಪಗೆಹಳ್ಳಿ
2 ಭೈರಪ್ಪನಹಳ್ಳಿ
3 ಕರಿಯಪ್ಪನಹಳ್ಳಿ
4 ಬುಕ್ಕ ಸಾಗರ
5 ಮಹಂತಲಿಂಗಾಪುರ
6 ರಾಗಹಳ್ಳಿ
7 ಶಿವನಹಳ್ಳಿ

ಫಾರೆಸ್ಟಿನ ದಕ್ಷಿಣಕ್ಕೆ.

1 ಕಂಸಾರಿಯಟ್ಟಿ ಇಲಾಖಾ "ಕಾವಲಿನ" ಸರಹದ್ದು ಕಲ್ಲುಗಳು

ಫಾರೆಸ್ಟಿನ ಪಶ್ಚಿಮಕ್ಕೆ.

1 ಚಿಕ್ಕ ಮುಕ್ಕೊಡ್ಲು
2 ಹುಚ್ಚೀರೇಗವುಡನಪಾಳ್ಯ
3 ತಟ್ಟುಗುಪ್ಪೆ
4 ಥರಳು
5 ಗುಳಕಮಲಿ

ಬಿಳಿಕಲ್ ಫಾರೆಸ್ಟು.

ಬಿಳಿಕಲ್ ಫಾರೆಸ್ಟು ಬಂದೇ ತಾಕ್ ಆಗಿರುತ್ತೆ, ಇದರ ಸುತ್ತಲು 22 ಗಜಕ್ಕೆ ಸಮವಾದ ಅಂತರವು ಮಾಡಲ್ಪಟ್ಟ ಗಂಟರ್‌ಯವರ ಬಂದು ಸಂಕಲಿ ಅಗಲದ ಡಿವಾರ್‌ಕೇರ್ಷ ಲೈನ್‌ಹಾಕಲ್ಪಟ್ಟಿರುತ್ತೆ. ಈ ಲೈನಿನ ಫಾಸಲೆಯು 46 ಮೈಲಿ, 5 ಫರ್‌ಲಾಂಗ್ ಇರುತ್ತೆ. ಈ ಲೈನಿನಲ್ಲಿ ಕೊನೆವರಿವಿಗೂ ಭೂಮಿ ಮೇಲೆ 5 ಅಡಿ ಎತ್ತರವುಳ್ಳ ದೊಡ್ಡ ಮೈಲಿಕಲ್ಲುಗಳಿಂದಲೂ ಬಂದು ಅಡಿ ಎತ್ತರವುಳ್ಳ ಸಣ್ಣ ಫರ್‌ಲಾಂಗ್ ಕಲ್ಲುಗಳಿಂದಲೂ ಗುರ್ತುಮಾಡಲ್ಪಟ್ಟಿದೆ. ಮೈಲಿಕಲ್ಲುಗಳು ಸದರೀ ಲೈನು ಮತ್ತು ಮನಿಯಂಬಾಳದಿಂದ ಕಾರ್ಕಕೋಟೆಗೆ ಹೋಗುವ ರಸ್ತೆ ಇವು ಸೇರುವ ಸ್ಥಳದಲ್ಲಿ 0 ಗುರ್ತು ಹಾಕಲ್ಪಟ್ಟಿರುವ ಸ್ಥಳದಿಂದ ಮೊದಲು ಮಾಡಿ ಕ್ರಮಶಃ ಸಂಖೆ ಹಾಕಲ್ಪಟ್ಟಿರುತ್ತೆ; ಫರ್‌ಲಾಂಗ್ ಕಲ್ಲುಗಳು ಪ್ರತಿ ಮೈಲಿವಳಿಗೆ ಕ್ರಮಶಃ ಸಂಖೆಹಾಕಲ್ಪಟ್ಟಿರುತ್ತೆ. ಎಡಗಡೆ ಇಂದ ಬಲಗಡೆಗೆ ಹೋಗಲು (ಫೆಡಿಯಾರದ ಮುಳ್ಳುಗಳೋಪಾದಿಯಲ್ಲಿ) ಡಿವಾರ್ಕೇರ್ಷ ಲೈನಿನ ಎಡಭಾಗದಲ್ಲಿ ಇದರಡೀ ಕಂಡ ಗ್ರಾಮಗಳು ಯಾ ಮುಖ್ಯವಾದ ಜಮ್ರ್ಗಳು ಇರುತ್ತವೆ:—

ಘಾರೆಸ್ಟಿನ ಉತ್ತರಕ್ಕೆ.

1 ದೇವರಹಳ್ಳಿ
2 ಮರ್ಲವಾಡಿ
3 ಯಲಚವಾಡಿ
4 ವಾಸಪಟ್ಣ

ಘಾರೆಸ್ಟಿನ ಪೂರ್ವಕ್ಕೆ.

1 ಕುಂಪಣಿಶೇಮೆ ಸರಹದ್ದು
2 ತೇರಬೀದಿ
3 ಕಾಡಬೆವನಹಳ್ಳಿ

ಘಾರೆಸ್ಟಿನ ದಕ್ಷಿಣಕ್ಕೆ

1 ತಿಪ್ಪೂರು
2 ಗುಳಗನಹಳ್ಳಿ
3 ಹೇರಿಂದ್ಯಾಪನಹಳ್ಳಿ
4 ಹಂಚಿಗುಳಿ
5 ಕೆಬ್ಬರೆ
6 ಗೊಲ್ಲಹಳ್ಳಿ
7 ಬನ್ನಹಳ್ಳಿದೊಡ್ಡಿ
8 ದೊಡ್ಡಗುಳಿ
9 ಅರಕೆರೆ

ಘಾರೆಸ್ಟಿನ ಪಶ್ಚಿಮಕ್ಕೆ.

1 ನಾರಳಾಪುರ
2 ಗೊಲ್ಲಹಳ್ಳಿ
3 ಕೆರೆಅರಳಾಳುಸಂದ್ರ
4 ಗವುಡನಹಳ್ಳಿ
5 ಮಾವತ್ತೂರು
6 ಜೋಡಿ ಬಾಚಹಳ್ಳಿ
7 ಮಣಿಯಂಬಾಳು
8 ತೋಕಸಂದ್ರ

ಈ ಘಾರೆಸ್ಟಿನಲ್ಲಿ ಸುಂದಪಟ್ಟ ಮತ್ತು ಬೆಟ್ಟಗನ್ವಡನ ದೊಡ್ಡಿ ಎಂಬ ಗ್ರಾಮಗಳು ಆವರಣ ದೇಖಲಿ ಸೇರಿ ಇವೆ. ಈ ಅವರಣಗಳು 6 ಅಡಿ ಅಗಲವುಳ್ಳ ಸಾಧಾರಣವಾದ ಡಿಮಾರ್ಕೇಷನ್ ಲೈನಿನಿಂದ ಗುರ್ತು ಮಾಡಲ್ಪಟ್ಟಿವೆ.

ಕುಂಬಳಗೋಡು ಘಾರೆಸ್ಟು.

ಕುಂಬಳಗೋಡ್ ಘಾರೆಸ್ಟು ವಂದೇ ತಾಕ್ ಆಗಿರುತ್ತದೆ. ಇದರ ಸುತ್ತಲೂ 22 ಗಜಕ್ಕೆ ಸಮವಾದ ಠರಾವ್ ಮಾಡಲ್ಪಟ್ಟು ಗುಂಟರಿ ಯವರ ವಂದು ಸಂಕಲಿ ಅಗಲವ ಡಿಮಾರ್ಕೇಷನ್ ಲೈಕ್ ಹಾಕಲ್ಪಟ್ಟಿರುತ್ತೆ. ಈ ಲೈನಿನ ಘಾಸಲೆಯು 10 ಮೈಲಿ, 7 ಫರಲಾಂಗ್, 210 ಗಜಗಳು ಇರುತ್ತೆ; ಈ ಲೈನಿನಲ್ಲಿ ಕೊನೆವರಿಗೂ ಭೂಮಿ ಮೇಲೆ 5 ಅಡಿ ಎತ್ತರವುಳ್ಳ ದೊಡ್ಡ ಮೈಲಿ ಕಲ್ಲುಗಳಿಂದಲೂ ಬಂದು ಅಡಿ ಎತ್ತರವುಳ್ಳ ಸಣ್ಣ ಫರಲಾಂಗ್ ಕಲ್ಲುಗಳಿಂದಲೂ ಗುರ್ತು ಮಾಡಲ್ಪಟ್ಟಿದೆ. ಮೈಲಿ ಕಲ್ಲುಗಳು ಬನ್ನೀಕುಪ್ಪೆ ಭಂಡಿಜಾಡಿನಿಂದ 9 ಸಂಕಲಿ ಘಾಸಲೆ ಯಿರುವ ಜಾಡೇನಹಳ್ಳಿ ಹಳ್ಳದ ಎಡಭಾಗದ ಬಂಡೆಯಿಂದ ಮೊದಲು ಮಾಡಿ ಕ್ರಮಶಃ ಸಂಖೆ ಹಾಕಲ್ಪಟ್ಟಿವೆ; ಪರ್ಲಾಂಗ್ ಕಲ್ಲುಗಳು ಪ್ರತಿ ಮೈಲಿವಳಿಗೆ ಕ್ರಮಶಃ ಸಂಖೆ ಹಾಕಲ್ಪಟ್ಟಿರುತ್ತವೆ. ಎಡಗಡೆಯಿಂದ ಬಲಗಡೆಗೆ ಹೋಗಲು (ಘಡಿಯಾರದ ಮುಳ್ಳುಗಳೋಪಾದಿಯಲ್ಲಿ) ಡಿಮಾರ್ಕೇಷನ್ ಲೈನಿನ ಎಡಭಾಗದಲ್ಲಿ ಇದರಡೀ ಕಂಡ ಗ್ರಾಮಗಳು ಯಾ ಮುಖ್ಯವಾದ ಜಮೀನುಗಳು ಇರುತ್ತವೆ:—

ಘಾರೆಸ್ಟಿನ ಉತ್ತರದಲ್ಲಿ.

1 ಕೊಲೂರು
2 ತಿರುಮಲೀಕಟ್ಟೆ
3 ಚಿಕ್ಕೊಲೂರು
4 ಚನ್ನಮುತ್ತನಕೆರೆ.
5 ಕುಂಬಳಗೋಡು

ಘಾರೆಸ್ಟಿನ ಪೂರ್ವದಲ್ಲಿ.

1 ಕಣ್ಮಿಣಿಕಿ
2 13ನೇ ಮೈಲಿ ಕಲ್ಲಿನ ರೆಯಿಲ್ ರಸ್ತೆ ಭಾಗ
3 ಚಿಕ್ಕತಿಮ್ಮಯ್ಯನ ಕಟ್ಟೆ
4 ಹೆಜ್ಜಾಲ
5 ಹೊಲೇನಕಟ್ಟೆ
6 ದ್ಯಾವೇಲಿಂಗನ ಪಾಳ್ಯ
7 ಹುಚ್ಚೆಗನ್ವಡನ ಪಾಳ್ಯ
8 ಮಂಚಿನಾಯಿಕನಹಳ್ಳಿ

ಫಾರೆಸ್ಟಿನ ದಕ್ಷಿಣದಲ್ಲಿ.

1 ಲಕ್ಷ್ಮೀಸಾಗರ
2 ಲಕ್ಷ್ಮೀಸಾಗರ ಕೆರೆ

ಫಾರೆಸ್ಟಿನ ಪಶ್ಚಿಮದಲ್ಲಿ.

1 ವಾಜರಹಳ್ಳಿ
2 ಕರೇಹನುಮೇಗವುಡನ ಕಟ್ಟೆ
3 ಜಡೇನಹಳ್ಳಿ
4 ಬನ್ನಿಕಟ್ಟೆ
5 ಕರೇನಹಳ್ಳಿ

ತಾರೀಖು 20ನೇ ಏಪ್ರಿಲ್ 1884.

ನಂ. 9.—ಶಿವಮೊಗ್ಗಾ ಡಿಸ್ಟ್ರಿಕ್ಟು 1ನೇ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಸೈದ್ ನಸರುದ್ದೀನ್‌ಯವರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು 6 ವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 10.—ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಪಿ. ಪಂಚನಾಥರಾಯರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು ಯರಜೂವರೆ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಏಪ್ರಿಲ್ 1884.

ನಂ. 12.—ಇದರಿಂದ ಪ್ರಕಟಪಡಿಸುವದೇನಂದರೆ. ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟು ವುತ್ಪತ್ತೀ ಬಾಬತು ಇದರಡೀ ಕಂಡ ನ್ಯಾಟೂಗಳು ಅಸಿಸ್ಟೆಂಟ್ ಕ್ಯಸರ್‌ವೇಟರವರಿಂದ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಆಯಾ ತಾರೀಖಿನೊಳಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು:—

ಹರಾಜ್ ನಡಿಯತಕ್ಕ ಸ್ಥಳ.		ಹರಾಜಿನ ತಾರೀಖು.	ತೇಗದ ದಿಮ್ಮಿಗಳು.	ಕಾಡುಮರದ ದಿಮ್ಮಿಗಳು.	ಕೆಲಸಕ್ಕೆ ಬಾರದ ಕಾಡು ಮರದ ತೊಲೆಗಳು.	ಜಮ್ಲೆ
ಸೊರಬ	(ಸೊರಬ ತಾಲ್ಲೂಕು)	10ನೇ ಮೇ 1884.	0	10	50	60
ಕೆರೆಹಳ್ಳಿ	ಡಿಟೋ	13 ಡಿಟೋ	15	50	200	265
ತೆಲಗದ್ದೆ	ಡಿಟೋ	15 ಡಿಟೋ	100	0	175	275
ಶಿರಾಳಕೊಪ್ಪ	(ಶಿಕಾರಿಪುರ ತಾಲ್ಲೂಕು)	19 ಡಿಟೋ	10	200	200	410
ತುಂಬಿನಕಟ್ಟೆ	ಡಿಟೋ	21 ಡಿಟೋ	0	0	300	300
ಶಿಕಾರಿಪುರ	ಡಿಟೋ	23 ಡಿಟೋ	0	10	200	210
ಹೊಸೂರು	ಡಿಟೋ	26 ಡಿಟೋ	0	0	400	400
ಚಿಕ್ಕ ಹಲವನ್ನ	(ಹೊನ್ನಾಳಿ ತಾಲ್ಲೂಕು)	29 ಡಿಟೋ	0	19	22	41
ಚನ್ನಗಿರಿ	(ಚನ್ನಗಿರಿ ತಾಲ್ಲೂಕು)	6ನೇ ಜೂ 1884.	50	0	400	450
ಕುಂಟಿನಮಡು	(ತರೀಕೆರೆ ತಾಲ್ಲೂಕು)	11 ಡಿಟೋ	0	0	100	100
ತರೀಕೆರೆ	ಡಿಟೋ	13 ಡಿಟೋ	50	50	100	200
ಲಕ್ಕವಳ್ಳಿ	ಡಿಟೋ	16 ಡಿಟೋ	600	600	0	1200
ಕಣಬೂರು	(ಕೊಪ್ಪ ತಾಲ್ಲೂಕು)	20 ಡಿಟೋ	200	300	0	500
ಆಯನೂರು	(ಶಿವಮೊಗ್ಗ ತಾಲ್ಲೂಕು)	23 ಡಿಟೋ	50	150	100	300
ಶಿವಮೊಗ್ಗಾ	ಡಿಟೋ	25 ಡಿಟೋ	150	350	600	1100

ಹರಾಜಿನ ಪರತ್ತುಗಳು.—ಮೈಸೂರು ಗೆಜೆಟಿನಲ್ಲಿ ಫಾಯಿಷ್ ಮಾಡಲ್ಪಟ್ಟ 1873ನೇ ಇಸವಿ ಜೂ 12ನೇ ಮುಕ್ತಂ 20ನೇ ನಂಬರ್ ಇಸ್ತಿಹಾರ್‌ನಾಮೆ ಪ್ರಕಾರ ಇರುವದು ಮತ್ತು ಹರಾಜ್ ಕಾಲದಲ್ಲಿ ಓದಲ್ಪಡುವದು.

ಬಮೋಜೀಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.